**ಹಿರಿಯ** ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ,
ತಿ.ನರಸೀಪುರ

**ಅಪರಾಧಿಕ ಪ್ರಕರಣ ಸಂಖ್ಯೆ: 267/2018**

| | | |
|---|---|---|
| ದೂರುದಾರರು | : | ಕರ್ನಾಟಕ ಸರ್ಕಾರ<br>ಆರಕ್ಷಕರು, ತಿ.ನರಸೀಪುರ ಠಾಣೆ. |
| | | ವಿರುದ್ಧ |
| ಆರೋಪಿತರು | : ಎ1 | ರವಿ ಬಿನ್ ಸಿದ್ಧರಾಜಶೆಟ್ಟಿ<br>ಸುಮಾರು 38 ವರ್ಷಗಳು,<br>ವಾಸ : ಹೊಸಕೋಟೆ ಗ್ರಾಮ,<br>ನಂಜನಗೂಡು ತಾಲ್ಲೂಕು. |
| | ಎ2 | ಸೋಮಣ್ಣ ಬಿನ್ ಮರಿಸ್ವಾಮಿ,<br>ಸುಮಾರು 30 ವರ್ಷಗಳು,<br>ವಾಸ : ಹೊಸಕೋಟೆ ಗ್ರಾಮ,<br>ನಂಜನಗೂಡು ತಾಲ್ಲೂಕು. |

## ದೋಷಾರೋಪಣೆ

(ಶ್ರೀ ಮಹಾವೀರ ಎಂ.ಕರೆಣ್ಣವರ್. ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಆದ ನಾನು ಆರೋಪಿಯಾದ ನಿಮ್ಮ ವಿರುದ್ಧ ಮಾಡುವ ದೋಷರೋಪಣೆ ಏನೆಂದರೆ)

ಮೊದಲನೆಯದಾಗಿ ದಿನಾಂಕ: 07-09-2009 ರಂದು ಚಾಸಾ-1 ರವರು ತಮ್ಮ ಜಮೀನಿನ ವ್ಯವಸಾಯದ ಕೆಲಸದ ಪ್ರಯೋಗಕ್ಕಾಗಿ ತಿ.ನರಸೀಪುರ ಎಸ್.ಬಿ.ಎಂ. ಬ್ಯಾಂಕ್‌ನಲ್ಲಿ ಸಾಲದ ಮುಖಾಂತರ ಕೆಎ-55/ಟಿ/273 ರ ಟ್ರಾಕ್ಟರ್ ಮತ್ತು ಕೆಎ-55/ಟಿ-274 ರ ಟ್ರೇಲರ್ ಅನ್ನು ಖರೀದಿಸಿದ್ದು, ನಂತರ ಸದರಿ ಟ್ರಾಕ್ಟರ್ ಅನ್ನು ಚಾಸಾ-1 ರವರು ತಮ್ಮ ಜಮೀನು ಕೆಲಸಕ್ಕೆ ಉಪಯೋಗಿಸಿಕೊಂಡು ತಮ್ಮ ಜಮೀನಿನಲ್ಲಿ ವ್ಯವಸಾಯದ ಕೆಲಸ ಇಲ್ಲದಿದ್ದ ಸವಯದಲ್ಲಿ ಟ್ರಾಕ್ಟರ್ ಅನ್ನು ಮನೆಯ ಬಳಿಯೆ ನಿಲ್ಲಿಸಿಕೊಳ್ಳುತ್ತಿದ್ದು, ಇದನ್ನು ಗಮನಿಸಿದ 1 ಮತ್ತು 2 ನೇ ಆರೋಪಿಗಳಾದ ನೀವುಗಳು ಸಮಾನ ಉದ್ದೇಶ ಹೊಂದಿ ಚಾಸಾ-1 ರವರ ಬಳಿ ಟ್ರಾಕ್ಟರ್ ಮತ್ತು ಟ್ರೇಲರ್ ಅನ್ನು ಒಂದು ತಿಂಗಳಿಗೆ ರೂ.11,000/- ಬಾಡಿಗೆ ಕೊಡುವುದಾಗಿ ತಿಳಿಸಿ ದಿನಾಂಕ 10.06.2016 ರಂದು ತಿ.ನರಸೀಪುರ ತಾಲ್ಲೂಕು, ನೀಲಸೋಗೆ ಗ್ರಾಮ, ಚಾಸಾ-1 ರವರ ಮನೆಯ ಬಳಿಯಿಂದ ಪಡೆದುಕೊಂಡು 6 ತಿಂಗಳಾದರೂ ಚಾಸಾ-1 ರವರಿಗೆ ಕೊಟ್ಟ ಮಾತಿನಂತೆ ಟ್ರಾಕ್ಟರ್ ಬಾಡಿಗೆಯನ್ನು ನೀಡದೆ ಇದ್ದುದರಿಂದ ಚಾಸಾ-1 ರವರು ಕೇಳಲು ಹೋದಾಗ ಅವರಿಗೆ 6 ತಿಂಗಳಿನ ಬಾಡಿಗೆ ರೂ.66,000/- ಗಳನ್ನು ನೀಡುವ ಬದಲು ರೂ.10,000/- ಗಳನ್ನು ಮಾತ್ರ ನೀಡಿ ಉಳಿಕೆ ರೂ56,000/- ಗಳನ್ನು ನೀಡದೆ, ಟ್ರಾಕ್ಟರ್

ರಿಪೇರಿಗೆ ಬಂದಿರುತ್ತದೆ  ಅದನ್ನು ರಿಪೇರಿಗೆ ಬಿಟ್ಟಿರುತ್ತೇವೆಂದು ಸುಳ್ಳು ಹೇಳಿದ್ದು, ಸದರಿ ಅಪರಾಧವು ಭಾರತೀಯ ದಂಡ ಸಂಹಿತೆ ಕಲಂ.420 ಸಹ ಕಲಂ 34 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ಇದು ನನ್ನ ಸಂಜ್ಞೆಗೆ ಒಳಪಡುತ್ತದೆ.

ಎರಡನೆಯದಾಗಿ, ಮೇಲ್ಕಂಡ ದಿನ, ಸಮಯ, ಸ್ಥಳ ಹಾಗೂ ಸಂದರ್ಭದಲ್ಲಿ ಆರೋಪಿಗಳಾದ ನೀವುಗಳು ಸಮಾನ ಉದ್ದೇಶ ಹೊಂದಿ ಚಾಸಾ-1 ರವರಿಂದ ಪಡೆದ ಟ್ರಾಕ್ಟರ್ ಅನ್ನು ಚಾಸಾ-1 ರವರಿಗೆ ಗೊತ್ತಿಲ್ಲದ ಹಾಗೆ ಯಾರೋ ದಾವಣಗೆರೆ ರಾಜು ಎಂಬುವರಿಗೆ ಮಾರಾಟ ಮಾಡಿ, ಸಾಕ್ಷ್ಯಾಧಾರಗಳನ್ನು ನಾಶಪಡಿಸಿ ಚಾಸಾ-1 ರವರಿಗೆ ಮೋಸ ಮಾಡಿದ್ದು, ಸದರಿ ಅಪರಾಧವು ಭಾರತೀಯ ದಂಡ ಸಂಹಿತೆ ಕಲಂ. 4201 ಸಹ ಕಲಂ 34 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ಇದು ನನ್ನ ಸಂಜ್ಞೆಗೆ ಒಳಪಡುತ್ತದೆ.

ಪ್ರಶ್ನೆ **1 :** ದೋಷಾರೋಪಣೆ ಓದಿ ಹೇಳಿದುದು ಅರ್ಥವಾಯಿತೇ?
ಆರೋಪಿ 1 ರವರ ಉತ್ತರಃ
ಆರೋಪಿ 2 ರವರ ಉತ್ತರಃ

ಪ್ರಶ್ನೆ **2 :** ನೀವು ಈ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆ ಆಗಬೇಕೇ?
ಆರೋಪಿ 1 ರವರ ಉತ್ತರಃ
ಆರೋಪಿ 2 ರವರ ಉತ್ತರಃ

ಈ ಮೇಲ್ಕಂಡ ಆಪಾದನೆಗಳನ್ನು ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುವುದಾಗಿ ಈ ಮೂಲಕ ನ್ಯಾಯಾಲಯದ ವಿಚಾರಣೆಗೆ ಒಳಪಟ್ಟಿರುವುದಾಗಿ ಈ ಮೂಲಕ ನಿರ್ದೇಶಿಸುತ್ತೇನೆ.

(ಮೇಲ್ಕಂಡ ಆರೋಪಿತರ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ ಸರಿ ಇದೆಯೆಂದು ನನ್ನ ಸಮಕ್ಷಮ ಖಾತ್ರಿಪಡಿಸಿಕೊಂಡಿರುತ್ತೇನೆ.)

(ಮಹಾವೀರ ಎಂ. ಕರೆಣ್ಣವರ್)
**ಹಿರಿಯ** ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ತಿ.ನರಸೀಪುರ.